ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 2, Sep-Oct 2022, Pp. 86-93.
©*IIMRD*, Mysuru

IIMRD JOURNALS
www.iimrd.com

# ಮನುಸ್ಮೃತಿಯಲ್ಲಿ ಆಹಾರ ಪದ್ಧತಿ

**ಡಾ. ಪತ್ರೆಪ್ಪ. ಸಿಂಗಾರಗೊಪ್ಪ***

*ಅತಿಥಿ ಉಪನ್ಯಾಸಕರು, ಕನ್ನಡ ವಿಭಾಗ, ಶ್ರೀಮತಿ ಆಯ್. ಎಸ್. ಯಾದವಾಡ ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತರ ಅಧ್ಯಯನ ಕೇಂದ್ರ, ರಾಮದುರ್ಗ.

***ಸಾರಾಂಶ:* (Abstract)**

*ಭಾರತ ದೇಶ ತನ್ನದೇಯಾದಂತ ಸಂಸ್ಕೃತಿ ಮತ್ತು ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿರುವ, ಬಹುತ್ವದಲ್ಲಿ ಏಕತೆ ಒಳಗೊಂಡಿರುವಂತದು. ಮಾನವ ತನ್ನ ಹುಟ್ಟಿನಿಂದ ಪ್ರಾರಂಭಗೊಂಡು ಅವನ ಬುದ್ಧಿಶಕ್ತಿ ಬೆಳೆಯುವವರೆಗೂ ಬೆಟ್ಟ ಗುಡ್ಡಗಳಲ್ಲಿ, ಗುಹೆಗಳಲ್ಲಿ ಮರದ ಪೊಟರೆಗಳಲ್ಲಿ ವಾಸಿಸುತ್ತಾ ಅರಣ್ಯದಲ್ಲಿ ದೊರೆಯುವ ಗೆಡ್ಡೆ–ಗೆಣಸು, ಮಾಂಸ ಇವುಗಳನ್ನು ತನ್ನ ಆಹಾರವನ್ನಾಗಿ ಉಪಯೋಗಿಸಿಕೊಂಡು ಬಂದಿರುವುದನ್ನು ಚಾರಿತ್ರಿಕ ಘಟನೆಗಳ ಮೂಲಕ ತಿಳಿದುಕೊಳ್ಳಬಹುದು. ಪ್ರಾಚೀನತೆಯಿಂದ ಪ್ರಾರಂಭಗೊಂಡ ಈ ಆಹಾರ ಪದ್ಧತಿಯ ಚರ್ಚೆ ಆಧುನಿಕ ಯುಗದಲ್ಲಿ ಪ್ರಜ್ಞಾವಂತ ನಾಗರಿಕನಲ್ಲಿಯೂ ಕೂಡಾ ಬಹು ಚರ್ಚಿತವಾದಂತಹ ವಿಷಯವಾಗಿದೆ. ಇಂತಹ ಆಹಾರ ಪದ್ಧತಿಯೂ ಕಾಲಘಟ್ಟದಿಂದ ಕಾಲಘಟ್ಟಕ್ಕೆ ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತಾ ಬಂದಿರುವುದನ್ನು ಕಾಣುತ್ತೇವೆ. ಹಿಂದು ಧರ್ಮದ ಧಾರ್ಮಿಕ ಗ್ರಂಥಗಳಲ್ಲಿ ಒಂದಾದ ಮನುಸ್ಮೃತಿಯಲ್ಲಿರುವ ಆಹಾರ ಪದ್ಧತಿಯ ಬಗೆಗಿನ ಮಾಹಿತಿಯನ್ನು ಆಧಾರಿಸಿ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.*

***ಮುಖ್ಯಪದಗಳು* (Keywords):** *ಮನುಸ್ಮೃತಿ, ಆಹಾರ,* ಪುರಾಣ, ಧಾರ್ಮಿಕ ಗ್ರಂಥಗಳು, *ಆಧುನಿಕ ಯುಗ.*

**ಪೀಠಿಕೆ**

ವೈದಿಕ ಧರ್ಮದ ಆಧಾರಸ್ತಂಭಗಳಾದ ವೇದ, ಉಪನಿಷತ್ತ್, ದರ್ಶನಗಳು, ಪುರಾಣಗಳು, ಸ್ಮೃತಿಗಳು ಇವೆಲ್ಲವುಗಳು ವೈದಿಕ ಸಂಪ್ರದಾಯಕ್ಕೆ ಬುನಾದಿಯನ್ನು ಒದಗಿಸಿವೆ. ಸ್ಮೃತಿಗಳು ವೇದಗಳನ್ನು ಮೂಲವಾಗಿ ಆಶ್ರಯಿಸಿಕೊಂಡಿರುವಂತವು. ವೇದಗಳಲ್ಲಿ ಇರುವ ಕೇಲವು ವಿಚಾರಗಳನ್ನು ತೆಗೆದುಕೊಂಡು ಸ್ಮೃತಿಕಾರರು ಸ್ಮೃತಿಗಳನ್ನು ರಚಿಸಿದರು. ಈ ಸ್ಮೃತಿಗಳಲ್ಲಿ ತಮ್ಮ ಜೀವನಕ್ಕೆ ಅನುಕೂಲಕರವಾದಂತ ಕಾನೂನುಗಳನ್ನು ರಚನೆ ಮಾಡಿಕೊಂಡಿರುವುದನ್ನು ನೋಡುತ್ತೇವೆ. ಮನುಸ್ಮೃತಿಯು ವೈದಿಕ ಧರ್ಮದ ಕಾನೂನುಗಳನ್ನು ಪಾಲಿಸುವ ಧಾರ್ಮಿಕ ಗ್ರಂಥವಾಗಿ ಬೆಳೆದು ಬಂದಿದೆ. ಮನು ತನ್ನ ಕಾಲಘಟ್ಟದ ಜೀವನ ಕ್ರಮ, ಆಚರಣೆ, ಸಂಪ್ರದಾಯ, ಆಹಾರ ಕ್ರಮಗಳು ಮುಂತಾದ ವಿಷಯಗಳು ಈ ಗ್ರಂಥದಲ್ಲಿ ಪ್ರಸ್ತಾಪಿಸಿರುವುದನ್ನು ಕಾಣುತ್ತೇವೆ. ಇಂದಿನ ಯುಗದಲ್ಲಿ ಜಾತಿ, ಧರ್ಮದ ಹೆಸರಿನಲ್ಲಿ ರಾಜಕೀಯ ಕ್ಷೇತ್ರ ಬೆಳೆದಿದೆ. ಅದರಲ್ಲಿಯೂ ಧಾರ್ಮಿಕತೆಯೂ ಎಲ್ಲ ರಾಜಕಾರಣಿಗಳಿಗೆ ಒಂದು ಅಸ್ತ್ರವಾಗಿ ಅವರ ಕೈಯಲ್ಲಿ ಗೋಚರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಒಬ್ಬ ಮನುಷ್ಯ ತಾನು ಸೇವಿಸುವ ಆಹಾರದ ಮೇಲೆಯೂ ಕೂಡಾ ರಾಜಕಾರಣ ಮಾಡುವ

***Please cite this article as:*** ಡಾ. ಪತ್ರೆಪ್ಪ. ಸಿಂಗಾರಗೊಪ್ಪ. (2022). ಮನುಸ್ಮೃತಿಯಲ್ಲಿ ಆಹಾರ ಪದ್ಧತಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(2). ಪು.ಸಂ. 86–93.*

ಜನರು ಇದ್ದಾರೆ. ತಳ ಸಮುದಾಯ ಮತ್ತು ಅಲ್ಪ ಸಂಖ್ಯಾತರು ಸೇವಿಸುವ ಆಹಾರವನ್ನೇ ಒಂದು ವಿಷಯವಾಗಿ ಇಟ್ಟುಕೊಂಡು ಕೊಲೆ, ಕೋಮುವಾದದ ಬಣ್ಣ ಎರೆಚುವ ಹಂತದವರೆಗೂ ಬೆಳೆದು ಬಂದಿದೆ. ದೇವರ ಹೆಸರಲ್ಲಿ ಒಬ್ಬರು ತಿನ್ನುವ ಆಹಾರಕ್ಕೆ ಕಲ್ಲು, ಮಣ್ಣು ಎಸೆಯುವ ಕೆಲಸ ಪ್ರಾರಂಭಗೊಂಡಿದೆ.

ಮನು ತನ್ನ ಮನುಸ್ಮೃತಿಯ ಗ್ರಂಥದ ಅಧ್ಯಾಯ–5 ರಲ್ಲಿ ಹೇಳುವಂತೆ:

*"ಪ್ರಾಣಸ್ಯಾನ್ನಮಿದಂ ಸರ್ವಂ ಪ್ರಜಾಪತಿರಕಲ್ಪಯತ್।*

*ಸ್ಥಾವರಂ ಜಂಗಮಂ ಚೈವ ಸರ್ವಂ ಪ್ರಾಣಸ್ಯ ಭೋಜನಂ ॥28॥*

*ಚರಾಣಾಮನ್ನಮಚರಾ ದಂಷ್ಟ್ರಿಣಾದಂಷ್ಟ್ರಿಣಃ।*

*ಅಹಸ್ತಾಶ್ಚ ಸಹಸ್ತಾನಾಂ ಶೂರಾಣಾಂ ಚೈವ ಭೀರವಃ ॥29॥* [1]

ಸೂತ್ರ 28 ಮತ್ತು 29ರಲ್ಲಿ ಹೇಳುವ ಹಾಗೇ ಈ ಜಗತ್ತಿನಲ್ಲಿರುವ ಸಮಸ್ತ ಸ್ಥಾವರ ಜಂಗಮ ಜೀವ ಜಂತುಗಳನ್ನು ಚರಾಚರ ವಸ್ತುಗಳನ್ನು ತಿನ್ನಲಿಕ್ಕೆಂದು ಪರಮಾತ್ಮ ಸೃಷ್ಟಿಸಿದ್ದಾನೆ. ಮನುವಿನ ಈ ವಿಚಾರವನ್ನು ಗಮನಿಸಿದಾಗ ಆ ದೇವರೆ ಈ ಭೂಮಿಯನ್ನು ಸೃಷ್ಟಿಸಿದ ಆದರೆ ಮನುಷ್ಯ ತನ್ನ ಅನುಕೂಲಕ್ಕೆ ತಕ್ಕಂತೆ ಆಹಾರ ಪದ್ಧತಿಯನ್ನು ಮಾರ್ಪಡಿಸಿ ಕೊಂಡು ಇನ್ನೊಬ್ಬರ ಆಹಾರ ಕ್ರಮಕ್ಕೆ ಕೊಡಲಿ ಪೆಟ್ಟು ಹಾಕುವುದನ್ನು ನೋಡಬಹುದಾಗಿದೆ. ಚಲಿಸುವ ಪಶು–ಪ್ರಾಣಿಗಳಿಗೆ ಚಲಿಸದಿರುವ ಹುಲ್ಲು ಸಸ್ಯಗಳು ಆಹಾರಗಳು, ಕೋರೆದಾಡೆಗಳಿರುವ ಸಿಂಹ ಹುಲಿಗಳಿಗೆ ಕೋರೆದಾಡೆಗಳಿರದ ಜಿಂಕೆ ಇತ್ಯಾದಿ ಆಹಾರಗಳು, ಕೈಗಳಿರುವ ಮನುಷ್ಯರಿಗೆ ಕೈಗಳಿಲ್ಲದ ಪಶು ಪ್ರಾಣಿಗಳು ಆಹಾರಾದಿಗಳು ಹಾಗೂ ಶೂರವಾದ ಹಾಗೂ ಕ್ರೂರವಾದ ಪ್ರಾಣಿಗಳಿಗೆ ಸಾಧುವಾದ ಬೀರುವಾದ ಪ್ರಾಣಿಗಳ ಆಹಾರಗಳು, ಹೀಗೆ ಈ ಜಗತ್ತಿನಲ್ಲಿ ಆಹಾರ ಕ್ರಮ ಬೆಳೆದಿರುವುದನ್ನು ಮನು ಒಪ್ಪಿಕೊಂಡಿರುವುದು.

ಮನು ತನ್ನ ಗ್ರಂಥದಲ್ಲಿ ಪಿತೃತರ್ಪಣ ಬೀಡುವ ಸಂದರ್ಭದಲ್ಲಿ ಯಾವ ಯಾವ ಪ್ರಾಣಿಗಳ ಮಾಂಸವನ್ನು ಬ್ರಾಹ್ಮಣರು ಸೇವಿಸುತ್ತಿದ್ದರು ಎಂಬುದನ್ನು ಅಧ್ಯಾಯ 3ರಲ್ಲಿ ಚರ್ಚಿಸುತ್ತಾನೆ.

*ಷಣ್ಮಾಸಾಂಶ್ಛಾಗಮಾಂಸೇನ ಪಾರ್ಷತೇನ ಚ ಸಪ್ತ ವೈ।*

*ಅಷ್ಟಾವೇಣಸ್ಯ ಮಾಂಸೇನ ರೌರವೇಣ ನವೈವತು ॥269॥*

*ದಶಮಾಸಾಂಸ್ತು ತೃಪ್ಯಂತಿ ವರಾಹಮಹಿಷಾಮಿಷೈಃ।*

*ಶತಕೂರ್ಮಯೋತ್ತು ಮಾಂಸೇನ ಮಾಸಾನೇಕಾದಶೈವ ತು ॥270॥*[2]

ಪಿತೃಗಳು ತೃಪ್ತಿ ಹೊಂದುವ ಸಲುವಾಗಿ ಮೀನಿನ ಮಾಂಸದಿಂದ ಎರಡು ತಿಂಗಳು, ಜಿಂಕೆಯ ಮಾಂಸದಿಂದ ಏಳು ತಿಂಗಳು, ಕೃಷ್ಣ ಮೃಗದ ಮಾಂಸದಿಂದ ಎಂಟು ತಿಂಗಳು, ಸಾರಂಗದ ಮಾಂಸದಿಂದ ಒಂಬತ್ತು ತಿಂಗಳು, ಕಾಡು ಹಂದಿ ಕಾಡು ಕೋಣದಿಂದ ಹತ್ತು ತಿಂಗಳು ಮೊಲ ಮತ್ತು ಆಮೆಗಳ ಮಾಂಸದಿಂದ ಹನ್ನೊಂದು ತಂಗಳು ಅಂದರೆ ಪಿತೃಗಳಿಗೆ ತರ್ಪಣ ನೀಡುವ ಸಂದರ್ಭದಲ್ಲಿ ಈ ಮೇಲೆ ಸೂಚಿಸಿದ ಎಲ್ಲ ಪ್ರಾಣಿಗಳ ಮಾಂಸವನ್ನು ಸ್ಮೃತಿಕಾರನ ಕಾಲಘಟ್ಟದ ಜನರು ಸೇವಿಸುತ್ತಿದ್ದರು ಮತ್ತು ಆ

ಕಾಲಘಟ್ಟದಲ್ಲಿ ಮಾಂಸಾಹಾರ ಆಹಾರ ಪದ್ದತಿ ಕ್ರಮವಾಗಿತ್ತೆಂಬುದನ್ನು ಈ ಕೃತಿಯು ಪುರಾವೆಯನ್ನು ನೀಡುತ್ತದೆ.

ಮನು ತನ್ನ ಗ್ರಂಥದಲ್ಲಿ ತನ್ನ ಕಾಲಘಟ್ಟದ ಗೃಹಸ್ಥ ಬ್ರಾಹ್ಮಣನು ಯಾವ ಯಾವ ಪದಾರ್ಥಗಳನ್ನು ವರ್ಜಿಸಬೇಕಾಗಿತ್ತು ಎಂಬುದನ್ನು ಅಧ್ಯಾಯ 6ರಲ್ಲಿ ಚರ್ಚಿಸಿದ್ದಾನೆ.

***"ಮುನ್ಯನ್ನೈರ್ವಿವಿಧೈರ್ಮೇಧ್ಯೈಃ ಶಾಕಮೂಲಫಲೇನ ವಾ।***

***ಏತಾನ್ಯೇವ ಮಹಾಯಜ್ಞಾನ್ ನಿರ್ವಪೇದ್ವಿಧಿಪೂರ್ವಕಂ ॥5॥***

***ಯದ್ಭಕ್ಷ್ಯಂ ಸ್ಯಾತ್ತತೋ ದದ್ಯಾದ್ಬಲಿಂ ಭಿಕ್ಷಾ ಚ ಶಕ್ತಿ ತಃ।***

***ಅಮ್ಮೂಲಫಲಭಿಕ್ಷಾರರ್ಚಯೇದಾಶ್ರಮಾಗತಾನ್ ॥7॥***

***ವರ್ಜಯೇನ್ಮಧುಮಾಂಸಂ ಚ ಭೌಮಾನಿ ಕವಕಾನಿ ಚ।***

***ಭೂಸ್ತೃಣಂ ಶಿಗ್ರುಕಂ ಚೈವ ಶ್ಲೇಷ್ಮಾತಕಫಲಾನಿ ಚ ॥14॥***

***ತ್ಯಜೇದಾಶ್ವಯುಜೇ ಮಾಸಿ ಮುನ್ಯನ್ನಂ ಪೂರ್ವಸಂಚಿತಂ।***

***ಜೀರ್ಣಾನಿ ಚೈವ ವಾಸಾಂಸಿ ಶಾಕಾಮೂಲಫಲಾನಿ ಚ ॥15॥***

***ನ ಫಾಲಕೃಷ್ಟಮಶ್ನೀಯಾದುತ್ಸೃಷ್ಟಮಪಿ ಕೇನಚಿತ್।***

***ನ ಗ್ರಾಮಜಾತಾನ್ಯಾರ್ತೋಽಪಿ ಮೂಲಾನಿ ಚ ॥16॥***[3]

ಗೃಹಸ್ಥನಾದವನು ಪವಿತ್ರವಾದ ನೀವಾರಾದಿ ಮುನಿಗಳಿಗೇ ಮೀಸಲಾಗಿರುವ ಆಹಾರಗಳೆಂದರೆ ಗಡ್ಡೆ–ಗೆಣಸು ಹಣ್ಣು–ಹಂಪಲಗಳನ್ನು ಸೇವಿಸುತ್ತಾ ವಿಧಿಪೂರ್ವಕ ಪಂಚಮಹಾಯಜ್ಞ ಆಚರಿಸುತ್ತಾ ತಾನು ಯಾವ ಆಹಾರವನ್ನು ಸೇವಿಸುತ್ತಾನೇ ಅದೇ ಆಹಾರದಿಂದ ವೈಶ್ವದೇವ ಬಲಿಹರಣ ಮಾಡಬೇಕು ತನ್ನ ಶಕ್ತಾನುಸಾರ ಭಿಕ್ಷೆ ನೀಡಬೇಕು. ತನ್ನ ಆಶ್ರಮಕ್ಕೆ ಬಂದಂತ ಅತಿಥಿಗಳಿಗೆ ನೀರು ಗಡ್ಡೆ ಗೆಣಸು ಹಣ್ಣು ಹಂಪಲಗಳನ್ನು ನೀಡುವುದು ಆಹಾರ ಕ್ರಮವಾಗಿತ್ತು ಇವುಗಳ ಜೊತೆಗೆ ಆತ ವರ್ಜಿಸಬೇಕಾದ ಪದಾರ್ಥಗಳೆಂದರೆ ಮದ್ಯ ಮತ್ತು ಮಾಂಸಗಳನ್ನು ಅಣಬೆಗಳನ್ನು, ನುಗ್ಗೆಕಾಯಿ, ಭೂಸ್ತೃಣ ಹಾಗೂ ಬಳ್ಳಿ ಹಣ್ಣು ಇದರ ಜೊತೆಗೆ ಸಂಗ್ರಹಿಸಿಟ್ಟ ಆಹಾರಗಳಾದ ಗಡ್ಡೆ ಗೆಣಸು ಹಳೆಯದಾದ ಜೀರ್ಣವಸ್ತ್ರಗಳನ್ನು ನೇಗಿಲಿನಿಂದ ಉತ್ತಿ ಬಿತ್ತಿದ ಧಾನ್ಯವನ್ನು ಗ್ರಾಮದಲ್ಲಿ ಬೆಳೆದ ಕಂದ ಮೂಲ ಫಲಗಳನ್ನು ವರ್ಜಿಸಬೇಕೆಂದು ಮನುಸ್ಮೃತಿಯಲ್ಲಿ ತಿಳಿಸಲಾಗಿದೆ.

ಮನುಸ್ಮೃತಿಯ ಅಧ್ಯಾಯ 5ರಲ್ಲಿ ನಿಷೇಧ ಪದಾರ್ಥಗಳು ಕುರಿತು ಚರ್ಚಿಸಿರುವನು ಯಾವ ಯಾವ ಪದಾರ್ಥಗಳನ್ನು ಬ್ರಾಹ್ಮಣರು ತಿನ್ನಬಾರದು ಎಂಬುದನ್ನು ಮನು ಹೇಳುತ್ತಾನೆ.

***ಲಶುನಂ ಗೃಂಜನಂ ಚೈವ ಪಲಾಂಡುಂ ಕವಕಾನಿ ಚ।***

***ಅಭಕ್ಷ್ಯಾಣಿ ದ್ವಿಜಾತೀನಾಂ ಅಮೇಧ್ಯಪ್ರಭವಾಣಿ ಚ ॥5॥***

***ಲೋಹಿತಾನ್ ವೃಕ್ಷನಿರ್ಯಾಸಾನ್ ವೃಶ್ಚನಪ್ರಭವಾಂಸ್ತಥಾ।***

***ಶೇಲುಂ ಗವ್ಯ ಚ ಪೇಯೂಷಂ ಪ್ರಯತ್ನೇನ ವಿವರ್ಜಯೇತ್ ॥6॥***[4]

ಬೆಳ್ಳುಳ್ಳಿ, ಕೆಂಪು ಬೆಳ್ಳುಳ್ಳಿ, ಈರುಳ್ಳಿ ಅಣಬಿ ಇವು ಕಲ್ಮಶದಲ್ಲಿ ಹುಟ್ಟುತ್ತವೆಯಾದ್ದರಿಂದ ಬ್ರಾಹ್ಮಣರು ಇವುಗಳನ್ನು ಸೇವಿಸಬಾರದು. ಮರದ (ಮರದ ಹಣ್ಣುಗಳಿಂದ) ತೊಗಟೆಯಿಂದ ಭಟ್ಟಿ ಇಳಿಸುವ ಸಾರವನ್ನು ಕೆಂಪು ಪೇಯಗಳನ್ನು, ಮರಗಳನ್ನು ಕೆತ್ತಿದಾಗ ಕಡಿದಾಗ ಸ್ರವಿಸುವ ರಸಗಳನ್ನು, ಬೆಳ್ಳಿ ಹಣ್ಣುಗಳನ್ನು, ಬಹಳ ದಿನವಾದ ಹಸುವಿನ ಹಾಲು, ಈ ಎಲ್ಲ ಆಹಾರ ಪದಾರ್ಥಗಳು ನಿಷಿದ್ಧ. ಬಹುಸಂಖ್ಯಾತ ಜನರ ಆಹಾರವು ಬ್ರಾಹ್ಮಣರಿಗೆ ನಿಷಿದ್ಧ ಆಹಾರ ಪದಾರ್ಥಗಳೆಂದು ಕಲ್ಮಶದಲ್ಲಿ ಹುಟ್ಟುವ ಪದಾರ್ಥಗಳೆಂದು, ಇವೆಲ್ಲವುಗಳು ತಳ ಸಮುದಾಯ (ಶೂದ್ರ) ಜನರು ಸೇವಿಸುವ ಆಹಾರ ಪದಾರ್ಥಗಳಾಗಿದ್ದವೆಂಬುದನ್ನು ಸಾಬೀತು ಪಡಿಸುತ್ತದೆ. ಇಷ್ಟೇ ಅಲ್ಲದೇ ಯಾವ ಯಾವ ಪ್ರಾಣಿಯ ಮಾಂಸವನ್ನು ತಿನ್ನುತ್ತಾನೋ ಅವನಿಗೆ ಆ ಪ್ರಾಣಿಯ ಮಾಂಸವನ್ನಷ್ಟೇ ತಿನ್ನು ಮಾಂಸದ[5] ಎನ್ನುತ್ತಾರೆ. ಆದರೆ ಮೀನು ತನ್ನುವವನಿಗೆ ಸರ್ವ ಮಾಂಸದ ಎನ್ನುವುದರಿಂದ ಮೀನು ತಿನ್ನಬಾರದೆಂಬ ಕಟ್ಟಳೆಯನ್ನು ಮನು ಹಾಕುತ್ತಾನೆ. ಮುಳ್ಳುಹಂದಿ ಉದ್ದ ಕೂದಲಿನ ಮುಳ್ಳುಹಂದಿ, ಉಡ, ಖಡ್ಗ ಮೃಗ, ಮೊಲ, ಆಮೆ ಇವುಗಳನ್ನು ಪಂಚನಖಗಳುಳ್ಳ ಪ್ರಾಣಿಗಳಲ್ಲಿ ಹಾಗೂ ಒಂಟೆಯನ್ನು ಬಿಟ್ಟು ಒಂದೇ ಸಾಲು ಹಲ್ಲುಳ್ಳ ಪ್ರಾಣಿಗಳನ್ನು ತಿನ್ನಬಹುದು ಎಂದು ಮನು ಹೇಳುತ್ತಾನೆ. ಯಜ್ಞದಲ್ಲಿ ಬಲಿಕೊಡುವುದಕ್ಕಾಗಿ ಶಾಸ್ತ್ರದಲ್ಲಿ ಹೇಳಿದ ಪಶುಪಕ್ಷಿಗಳನ್ನು ವಧೆ ಮಾಡಬಹುದು. ತನ್ನನ್ನು ಅವಲಂಬಿಸಿದ ವೃದ್ಧ ಮಾತಾಪಿತೃಗಳನ್ನು ಇತ್ಯಾದಿಗಳ ಪೋಷಣೆಗಾಗಿ ಪಶುಪಕ್ಷಿಗಳನ್ನು ಅಗಸ್ತ್ಯನು ಪೂರ್ವಕಾಲದಲ್ಲಿ ವಧೆ ಮಾಡದಂತೆ ಮಾಡಬಹುದೆಂದಿರುವನು. ಅಣಬೆ, ಹೊಲಸು ತಿನ್ನುವ ಹಂದಿ, ಬೆಳ್ಳುಳ್ಳಿ, ಕೋಳಿ, ಈರುಳ್ಳಿ, ಕೆಂಪು ಬೆಳ್ಳುಳ್ಳಿ ಇವುಗಳನ್ನು ಬೇಕೆಂತಲೇ ತಿಂದರೆ ಬ್ರಾಹ್ಮಣನು ಜಾತಿ ಭ್ರಷ್ಟನಾಗಿ ಹೋಗುತ್ತಾರೆಂದು ಮನು ತಿಳಿಸಿದ್ದಾನೆ. ಶೂದ್ರರ ಆಹಾರವನ್ನು ಮನು ತಿಳಿಸಿರುವನು. ಯಜ್ಞಕ್ಕಾಗಿ ಪಶುವನ್ನು ಕೊಂದು ಮಾಡಿದ ಮಾಂಸಭಕ್ಷಣವು ದೇವಿಕ ರೀತಿಯೆಂದು ಹೇಳಲ್ಪಟ್ಟಿದೆ. ಇದಕ್ಕೆ ವಿರುದ್ಧವಾಗಿ ಅನ್ಯಸಂದರ್ಭಗಳಲ್ಲಿ ಮಾಡುವ ಅಕಾರಣ ಪಶುವಧೆ ಮತ್ತು ಮಾಂಸಭಕ್ಷಣವು ರಾಕ್ಷಸ ರೀತಿಯೆಂದು ಹೇಳಲ್ಪಟ್ಟಿದೆ.[6] ಯಜ್ಞದ ಹೆಸರಲ್ಲಿ ಮಾಂಸವನ್ನು ಸೇವಿಸಬಹುದು. ಅದರಲ್ಲಿಯು ಪಶುಮಾಂಸವನ್ನು ಸೇವಿಸಬಹುದು ಆದರೆ ಯಜ್ಞಕಾರ್ಯ ಹೊರತಾಗಿ ಮಾಂಸ ಸೇವಿಸಿದ್ದು, ಆದರೆ ಅದು ರಾಕ್ಷಸ ಪ್ರವೃತ್ತಿಯೆಂಬುದನ್ನು ಮನುವಿನವಾದವಾಗಿದೆ. ಕೃಷಿಕಾಯಕ (ಕುಯಿಲು) ಸಂದರ್ಭದಲ್ಲಿ ಪಶುಯಾಗ ಮಾಡಲಾಗುತ್ತಿತ್ತು ಎಂಬುದನ್ನು ಅಧ್ಯಾಯ 4ರಲ್ಲಿ ಮನು ಹೇಳುತ್ತಾನೆ.

*ಸಸ್ಯಾಂತೇ ನವಸಸ್ಯೇಷ್ಟ್ಯಾ ತಥರ್ತ್ವಂತೇ ದ್ವಿಜೋಧ್ವರೈಃ।*

*ಪಶುನಾ ತ್ವಯನಸ್ಯಾದೌ ಸಮಾಂತೇ ಸೌಮಿಕೈರ್ಮಖೈಃ ॥26॥*

*ನಾನಿಷ್ಟ್ವಾ ನವಸಸ್ಯೇಷ್ಟ್ಯಾ ವಾ ಪಶುನಾ ಚಾಗ್ನಿಮಾನ್ದ್ವಿಜ।*

*ನವಾನ್ನಮದ್ಯಾನ್ಮಾಂಸಂ ವಾ ದೀರ್ಘಮಾಯುರ್ಜಿಜೀವಿಷುಃ ॥27॥*

*ನವೇನಾನರ್ಚಿತಾ ಹ್ಯಸ್ಯ ಪಶುಹವ್ಯೇನ ಚಾಗ್ನತಃ।*

*ಪ್ರಾಣಾನೇವಾತ್ತುಮಿಚ್ಛಂತಿ ನವಾನ್ನಾಮಿಷಗರ್ಧಿನಃ ॥28॥*[7]

ಮೊದಲಿನ ಸಸ್ಯಗಳು ಕುಯಿಲು ಮಾಡಿದ ಮೇಲೆ ಹೊಸ ಸಸ್ಯಗಳು ಹುಟ್ಟುವಾಗ ಆಗ್ರಯಣ ಇಷ್ಟೀಯನ್ನು ಋತುವಿನ ಅಂತ್ಯದಲ್ಲಿ ಚಾತುರ್ಮಾಸ್ಯೇಷ್ಟಿಯನ್ನುಉತ್ತರಾಯಣ ದಕ್ಷಿಣಾಯನಗಳ ಆರಂಭದಲ್ಲಿ

ಪಶುಯಾಗವನ್ನು ಮಾಡಬೇಕು. ವರ್ಷಾಂತ್ಯದಲ್ಲಿ ಅಗ್ನಿಷ್ಟೋಮಯಾಗ, ಸೋಮಯಾಗ ಮಾಡಬೇಕು ದೀರ್ಘವಾದ ಆಯುಸ್ಸನ್ನು ಜೀವಿಸ ಬಯಸುವ ಬ್ರಾಹ್ಮಣನು ಆಗ್ರಾಯಣೇಷ್ಟಿ ಮಾಡದೇ ಹೊಸಧಾನ್ಯವನ್ನು ಉಣ್ಣಕೂಡದು ಪಶುಯಾಗ ಮಾಡದೇ ಮಾಂಸವನ್ನು ತಿನ್ನಬಾರದು. ನವಧಾನ್ಯಗಳಿಂದ ಮಾಡಿದ ಅನ್ನದಿಂದ ಹಾಗೂ ಪಶು ಮಾಂಸದಿಂದ ಹವಿಸ್ಸಿನಿಂದ ಪೂಜಿಸಲ್ಪಡುವ ಅಗ್ನಿಗಳು ಹೊಸ ಅನ್ನ ಹಾಗೂ ಮಾಂಸವನ್ನಪೇಕ್ಷಿಸುತ್ತವೆ. ಅವು ದೊರೆಯದಿದ್ದರೆ ಅಗ್ನಿ ಹೋತ್ರಿಯ ಪ್ರಾಣವನ್ನು ತಿನ್ನಲೊಚ್ಛಿಸುತ್ತವೆ. ಅಂದರೆ ಕುಯಿಲು ಸಂದರ್ಭದಲ್ಲಿ ಪಶುಯಾಗ ನೀಡಿ ಅದರ ಮಾಂಸವನ್ನು ಬ್ರಾಹ್ಮಣರು ಸೇವಿಸುತ್ತಿದ್ದರೆಂಬುದು ಮನುವಿನ ವಿಚಾರದಿಂದ ಸಾಭೀತುಗೊಳ್ಳುತ್ತದೆ. ಪಂಕ್ತಿಭೇದ ಇತ್ತಿಚ್ಚಿನ ದಿನಗಳಲ್ಲಿ ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಪಂಕ್ತಿಭೇದವು ಬಹುಚರ್ಚಿತವಾದ ವಿಷಯವಾಗಿತ್ತು ಈವಿಷಯ ಇತ್ತೀಚಿನದು ಅಲ್ಲಾ ಇದು ಅನಾದಿಕಾಲದಿಂದಲೂ ಬೆಳೆದು ಬಂದಿರುವುದು.

ಅದಕ್ಕೆ ಮನು ತನ್ನ ಗ್ರಂಥದಲ್ಲಿ ಅಧ್ಯಾಯ 2 ರಲ್ಲಿ ಪ್ರಸತುತ ಪಡಿಸಯತ್ತಾನೆ.

***ನ ಬ್ರಾಹ್ಮಣಸ್ಯ ತ್ವತಿಥಿರ್ಗೃಹೇ ರಾಜನ್ಯ ಉಚ್ಯತೇ।***
***ವೈಶ್ಯಶೂದ್ರೌ ಸಖಾ ಚೈವ ಜ್ಞಾತಯೋ ಗುರುರೇವ ಚ ॥110॥***
***ಯದಿ ತ್ವತಿಥಿಧರ್ಮೇಣ ಕ್ಷತ್ರಿಯೋ ಗೃಹಮಾವ್ರಜೇತ್।***
***ಭುಕ್ತವತ್ಸೂಕ್ತ ವಿಪೇಷು ಕಾಮಂ ತಮಪಿ ಭೋಜಯೇತ್॥111॥***
***ವೈಶ್ಯಶೂದ್ರಾವಪಿ ಪ್ರಾಪ್ತೌ ಕುಟುಂಬೇತಿಥಿಧರ್ಮಿಣೌ।***
***ಭೋಜಯ್ಯತ್ಸಹ ಭೃತ್ಯೈಸ್ತಾವಾನೃಶಂಸ್ಯಂ ಪ್ರಯೋಜಯನ್॥112॥***[6]

ಊಟಕ್ಕೆ ಬಂದ ಅತಿಥಿ ಬ್ರಾಹ್ಮಣನು ತನ್ನ ಕುಲ–ಗೋತ್ರಗಳನ್ನು ಹೇಳಿಕೊಳ್ಳಬಾರದು ಊಟಕ್ಕೋಸ್ಕರ ಕುಲಗೋತ್ರಗಳನ್ನು ಹೇಳಿಕೊಂಡವನು ವಾಂತಿ ಮಾಡಿದುದನ್ನು ಉಂಡಂತಾಗುತ್ತದೆ. ಬ್ರಾಹ್ಮಣನ ಮನೆಗೆ ಬಂದಂಥ ಕ್ಷತ್ರಿಯ ವೈಶ್ಯ, ಶೂದ್ರ ಗೆಳೆಯ ಸಂಬಂಧಿ ಹಾಗೂ ಗುರುವು ಇವರಾರೂ ಅತಿಥಿಗಳಾಗುವುದಿಲ್ಲ. ಕ್ಷತ್ರಿಯಾದಿಗಳು ಕೆಳಜಾತಿಯವರಾದರಿಂದ ಇವರು ಅತಿಥಿಗಳೆನಿಸುವುದಿಲ್ಲ. ಒಂದು ವೇಳೆ ಕ್ಷತ್ರಿಯ ಪರ ಊರಿನಿಂದ ಅತಿಥಿ ರುಪದಲ್ಲಿ ಬಂದರೆ ಬ್ರಾಹ್ಮಣ ಅತಿಥಿಗಳ ಭೋಜನವಾದ ನಂತರ ಆ ಕ್ಷತ್ರಿಯನಿಗೆ ಉಣಬಡಿಸುವುದು. ಹಾಗೆಯೇ ಪರ ಊರಿನಿಂದ ವೈಶ್ಯ ಅಥವಾ ಶೂದ್ರರು ಬಂದರೆ ಅವರಿಗೂ ಕೂಡಾ ಪಂಕ್ತಿಬೇಧವನ್ನು ಮಡಬೇಕೆಂದು ಮನು ತನ್ನ ಗ್ರಂಥದಲ್ಲಿ ತಿಳಿಯಪಡಿಸುತ್ತಾನೆ.

ಶ್ರಾದ್ಧ ಸಂದರ್ಭದಲಿ ಮಾಂಸದ ಅಡುಗೆಯ ಬಗ್ಗೆ ಅಧ್ಯಾಯ 3ರಲ್ಲಿ ಮನು ತಿಳಿಸುತ್ತಾನೆ.

***ಪಿತ್ರೂಣಾಂ ಮಾಸಿಕ ಶ್ರಾದ್ಧಂ ಮನ್ವಾಹಾರ್ಯಂ ವಿದುರ್ಬುಧಾಃ।***
***ತಚ್ಚಾಮಿಷೇಣ ಕರ್ತವ್ಯಂ ಪ್ರಶಸ್ತೇನ ಪ್ರಯತ್ನತಃ ॥123॥***[7]

ಪಿಂಡ ಯಜ್ಞದ ಬಳಿಕ ಮಾಸಿಕ ಶ್ರಾದ್ಧವು ಮಾಡಲ್ಪಡುವ ಕಾರಣ ಈ ಪಾರ್ವಣ ಶ್ರಾದ್ಧವನ್ನು ಪಿಂಡಾನ್ವಾಹಾರ್ಯಕವೆಂದು ಹೇಳುತ್ತಾರೆ. ಇದಕ್ಕೆ ಒಳ್ಳೆಯ ಮಾಂಸವನ್ನು ಉಪಯೋಗಿಸಬೇಕು ಶ್ರಾದ್ಧದಲ್ಲಿ ಮಾಂಸದ ಅಡುಗೆ ಮಾಡಬೇಕು. ಆಮಿಷಂ ಮಾಂಸ ಅಂದರೆ ಪಿಂಡ ಕಾರ್ಯ ಸಂದರ್ಭದಲ್ಲಿ ಮಾಂಸದ ಅಡುಗೆ ಮಾಡುತ್ತಿದ್ದರು ಎಂಬುದನ್ನು ಮನು ತನ್ನ ಸ್ಮೃತಿಯಲ್ಲಿ ಹೇಳುತ್ತಾನೆ.

ಅಂಬೇಡ್ಕರವರು ಸನಾತನ ಧರ್ಮದ ತತ್ವಗಳ ಅಧ್ಯಯನ ಕೈಗೊಂಡು ಹಿಂದುಗಳು ಗೋವನ್ನು ಪ್ರಸ್ತುತ ಸಂದರ್ಭದಲ್ಲಿ ದೇವತೆಯೆಂದು ಪೂಜಿಸುವವರಿಗೆ ಹಿಂದೂಗಳು ಯಾವ, ಯಾವ ಸಂದರ್ಭದಲ್ಲಿ ಗೋ ಮಾಂಸವನ್ನು ಸೇವಿಸಿದ್ದಾರೆ ಮತ್ತು ಯಾವ ದೇವತೆಗೆ ಎಂತಹ ತರಹದ ಆಕಳು ಬಲಿ ನೀಡುತ್ತಿದ್ದರು ಎಂಬುದಕ್ಕೆ ಅಂಬೇಡ್ಕರವರ ವಿಚಾರವನ್ನು ನೋಡಬಹುದು. ಡಾ. ಬಾಬಾ ಸಾಹೇಬ್ ಅಂಬೇಡ್ಕರವರ ಸಮಗ್ರ ಬರಹಗಳು ಮತ್ತು ಭಾಷಣಗಳು ಸಂಪುಟ–6 ಅಧ್ಯಾಯ–11ರಲ್ಲಿ ಹಿಂದೂಗಳು ಗೋಮಾಂಸವನ್ನು ಎಂದೂ ತಿನ್ನುತ್ತಿರಲಿಲ್ಲವೆ? ಬ್ರಾಹ್ಮಣರು ಗೋಮಾಂಸ ಭಕ್ಷಣೆಯನ್ನು ವರ್ಜಿಸಿದ್ದೇಕೆ? ಬ್ರಾಹ್ಮಣರು ಸಸ್ಯಹಾರಿಗಳಾದದ್ದು ಏಕೆ? 'ಗೋವಿನ ಮಾಂಸವನ್ನು ತಿನ್ನುವುದು ನತದೃಷ್ಟರನ್ನೇಕೆ ಅಸ್ಪೃಶ್ಯರನ್ನಾಗಿಸಿತು?' ಎಂಬ ಲೇಖನಗಳಲ್ಲಿ ಈ ವಿಷಯವನ್ನು ತೆಗೆದುಕೊಂಡು ಚರ್ಚಿಸಿದ್ದಾರೆ. ಅಂಬೇಡ್ಕರವರು ಹಿಂದೂಗಳು ಎಂದೂ ಗೋಮಾಂಸವನ್ನು ಭಕ್ಷಿಸುತ್ತಿರಲಿಲ್ಲವೇ? ಮತ್ತು ಗೋಹತ್ಯೆಯನ್ನು ಅವರು ಯಾವಾಗಲೂ ವಿರೋಧೀಸುತ್ತಲೇ ಇದ್ದರು ಎಂಬ ಅಭಿಪ್ರಾಯದ ಪರವಾಗಿರುವ ಪುರಾವೆ ಏನು? ಎಂಬ ಪ್ರಶ್ನೆಯನ್ನು ಹಾಕಿಕೊಂಡು ವೇದಗಳನ್ನು, ಬ್ರಾಹ್ಮಣಕಗಳನ್ನು, ಉಪನಿಷತ್ತುಗಳನ್ನು, ಸ್ಮೃತಿಗಳನ್ನು ಮುಂತಾದ ಹಿಂದೂ ಧರ್ಮದ ಕಾವ್ಯಗಳನ್ನು ಅಧ್ಯಯನಿಸಿ ಹಿಂದೂಗಳು ಗೋಮಾಂಸ ಭಕ್ಷಣೆ ಮಾಡಿರುವ ಮತ್ತು ಗೋಹತ್ಯೆಯನ್ನು ಹಿಂದೂಗಳು ವಿರೋಧಿಸಿಲ್ಲ ಎನ್ನುವಂತದ್ದು. ಹಿಂದೂಗಳು ಯಾವ ಯಾವ ಸಂದರ್ಭದಲ್ಲಿ ಗೋಮಾಂಸ ಭಕ್ಷಣೆ ಮಾಡಿದ್ದಾರೆ ಎಂಬುದಕ್ಕೆ ದಾಖಲಾತಿ ಸಮೇತ ವರದಿ ಮಾಡುತ್ತಾರೆ.

'ತೈತ್ತೀರಿಯ ಬ್ರಾಹ್ಮಣದಲ್ಲಿ ನಿಗದಿಯಾಗಿರುವ ಪುತ್ರಕಾಮೇಷ್ಠಿ ಯಾಗಗಳಲ್ಲಿ ಎತ್ತು ಮತ್ತು ಹಸುಗಳನ್ನು ಆಹುತಿ ಕೊಡಬೇಕಾಗಿದೆ. ಮಾತ್ರವಲ್ಲ ಯಾವ ಯಾವ ದೇವತೆಗಳಿಗೆ ಯಾವ ಯಾವ ಬಗೆಯ ಎತ್ತು ಮತ್ತು ಹಸುಗಳನ್ನು ಆಹುತಿ ಕೊಡಬೇಕೆಂದು ವಿವರಿಸಲಾಗಿದೆ. ಅದರಂತೆ ವಿಷ್ಣುವಿಗೆ ಆಹುತಿ ನೀಡಲು ಕುಬ್ಜವಾದ ಎತ್ತೊಂದನು ಆಯ್ಕೆ ಮಾಡಿಕೊಳ್ಳಬೇಕು, ವೃತ್ತನನ್ನು ವಧಿಸಿರುವ ಇಂದ್ರನಿಗೆ ಆಹುತಿಗಾಗಿ ಹಣೆಯ ಮೇಲಿನ ಹೊಳಪಿನ ಚುಕ್ಕೆಯಿದ್ದು ಕೆಳಕ್ಕೆ ಜೋಲುತ್ತಿರುವ ಕೊಂಬುಗಳನ್ನುಳ್ಳ ಎತ್ತನ್ನು ಆಯ್ಕೆ ಮಾಡಿಕೊಳ್ಳಬೇಕು, ಪೂಷನ್ ದೇವತೆಗೆ ಕರಿಯ ಹಸುವನ್ನು ಕೊಡಬೇಕು, ರುದ್ರನಿಗೆ ಕೆಂಪು ಹಸು ಇತ್ಯಾದಿ ಉಲ್ಲೇಖಗಳು ದಾಖಲಾಗಿವೆ. ತೈತ್ತೀರಿಯ ಬ್ರಾಹ್ಮಣದಲ್ಲಿ ಪಂಚಶಾರದೀಯ ಸೇವಾ ಎಂಬ ಇನ್ನೊಂದು ಯಾಗದ ಬಗ್ಗೆ ಉಲ್ಲೇಖವಿದೆ. ಈ ಯಾಗದಲ್ಲಿ ಅತಿ ಮುಖ್ಯವಾದ ಒಂದು ವಿಧಿಯ ಪ್ರಕಾರ ಐದು ವರ್ಷ ಯವಸ್ಸಿನ ಹದಿನೇಳು ಡುಬ್ಬವಿಲ್ಲದ ಗಿಡ್ಡ ಎತ್ತುಗಳನ್ನು ಹಾಗೂ ಅಷ್ಟೇ ಸಂಖ್ಯೆಯ ಮೂರು ವರ್ಷಕ್ಕೂ ಕಡಿಮೆ ಯವಸ್ಸಿನ ಗಿಡ್ಡ ಕಡಸಂಗಳನ್ನು ಬಲಿ ಕೊಡಬೇಕು"[10.]

ಅಂಬೇಡ್ಕರ್ ಅವರು ಹೇಳುವ ಹಾಗೆ ಯಾಗಗಳ ಸಂದರ್ಭದಲ್ಲಿ ಗೋವನ್ನು ಬಲಿ ನೀಡುತ್ತಿದ್ದರಷ್ಟೇ ಅಲ್ಲದೆ ವೈದಿಕ ಕಾಲದಲ್ಲಿಯೂ ಹಸು ಪವಿತ್ರವಾಗಿತ್ತು. ಅದರ ಪವಿತ್ರತೆಗಾಗಿಯೇ ಹಸುವಿನ ಮಾಂಸವನ್ನು ತಿನ್ನಬೇಕೆಂದು ವಾಜಸೇನೇಯಿ ಸಂಹಿತೆಯಲ್ಲಿ ಋಗ್ವೇದದ ಕಾಲದ ಆರ್ಯರು ಆಹಾರ ನಿಮಿತ್ತವಾಗಿ ಹಸುಗಳನ್ನು ಕೊಲ್ಲುತ್ತಿದ್ದರೆಂಬುದು ಹಾಗೂ ಹಸುವಿನ ಮಾಂಸ ತಿನ್ನುತ್ತಿದ್ದರೆಂಬುದು ಋಗ್ವೇದದಿಂದಲೇ ಸಾಬೀತಾಗುತ್ತದೆ. 'ಋಗ್ವೇದದ (10, 81–14)ಲ್ಲಿ ಇಂದ್ರ ಹೇಳುತ್ತಾನೆ "ನನ್ನೊಬ್ಬನಿಗಾಗಿ ಅವರ ಹದಿನೈದು ಇಪ್ಪತ್ತು ಎತ್ತುಗಳನ್ನು ಬೇಯಿಸುತ್ತಾರೆ. ಇನ್ನೊಂದೆಡೆ (10, 91–84) ಅಗ್ನಿಗಾಗಿ ಕುದುರೆಗಳೂ, ಹೋರಿಗಳು, ಎತ್ತುಗಳೂ, ಬರಡು ಹಸುಗಳು, ಮತ್ತು ಟಗರುಗಳನ್ನು ಆಹುತಿ ನೀಡಲಾಗಿತ್ತು ಎಂದು ಹೇಳಲಾಗಿದೆ.

ಋಗ್ವೇದದ 10, 72–6 ಶ್ಲೋಕಗಳಲ್ಲಿ ಹಸುವನ್ನು ಕತ್ತಿ ಅಥವಾ ಕೊಡಲಿಯಿಂದ ಕೊಲ್ಲಲಾಗುತ್ತಿತ್ತೆಂದು ತಿಳಿದುಬರುತ್ತದೆ.[11] ಯಜ್ಞ–ಯಾಗಗಳಲ್ಲಿ ಹಸುವಿನ ಮಾಂಸವನ್ನು ವೈದಿಕರು ಸೇವಿಸುತ್ತಿದ್ದರು ಎಂಬುದು, ಮತ್ತು 'ಪ್ರಾಚೀನ ಇಂಡೋ ಆರ್ಯನ ಯಾವುದಾದರು ಒಬ್ಬ ವ್ಯಕ್ತಿಯು ಮರಣ ಹೊಂದಿದಾಗ ಶವಸಂಸ್ಕಾರ ಸಂದರ್ಭದಲ್ಲಿ ಒಂದು ಪ್ರಾಣಿಯನ್ನು ಕೊಲ್ಲಬೇಕಾಗುತ್ತಿತ್ತು, ಮತ್ತು ಕೊಲ್ಲಲ್ಪಟ್ಟ ಪ್ರಾಣಿಯ ಅಂಗಾಗ ಸತ್ತವನ ದೇಹದ ಆಯಾಯ ಸೂಕ್ತ ಭಾಗದಲ್ಲಿ ಇಡಲಾಗುತ್ತಿತ್ತು ಎಂಬುದಕ್ಕೆ, ಪ್ರಾಣಿಯ ಹೃದಯವನ್ನು ಸತ್ತವನ ಹೃದಯದ ಮೇಲಿಡಬೇಕು.[12] ಶತಪತ ಬ್ರಾಹ್ಮಣ ಮತ್ತು ಅಪಸ್ತಂಭ ಧರ್ಮಸೂತ್ರಗಳ ಸಾಕ್ಷವು 'ಹಿಂದೂಗಳು ಗೋಹತ್ಯೆ, ಮತ್ತು ಗೋಮಾಂಸ ಭಕ್ಷಣೆಯ ವಿರುದ್ದವಾಗಿದ್ದರು ಎಂಬುದನ್ನು ಬೆಂಬಲಿಸುತ್ತದಾದರೂ ಗೋಹತ್ಯೆಯನ್ನು ನಿಷೇಧಿಸುತ್ತದೆ ಎನ್ನಲಾಗದು[13]. ಗೋಮಾಂಸದ ಕುರಿತು ಯಾಜ್ಞವಲ್ಕ್ಯನಿಗೆ ಶತಪಥ ಬ್ರಾಹ್ಮಣದ ಮಾತು ನಿರರ್ಥಕವಾಗಿತ್ತು. ಈ ಮೇಲಿನ ಮಾತಿಗೆ ಯಾಜ್ಞವಲ್ಕ್ಯನ ಪ್ರತಿಕ್ರಿಯೆ ಹೀಗಿದೆ "ನಾನು ಮಾತ್ರ ಅದನ್ನ ತಿಂದೇ ತೀರುತ್ತೇನೆ ಆದರೆ ಅದು ಕೋಮಲವಾಗಿದ್ದರೆ ಮಾತ್ರ"[14] ಅಂದರೆ ವೇದಗಳು ಮತ್ತು ಬ್ರಾಹ್ಮಣಗಳ ಕಾಲದಲ್ಲಿ ಹಸುವನ್ನು ಆಹಾರವಾಗಿ ಮತ್ತು ಯಜ್ಞಯಾಗಗಳ ಆಚರಣೆಯಲ್ಲಿ ಬಲಿಯಾಗಿ ಅರ್ಪಿಸುತ್ತಿದ್ದರು ಎಂಬ ವಿಚಾರವನ್ನು ಅಂಬೇಡ್ಕರವರು ಈ ಮೂಲಕ ದಾಖಲಿಸುತ್ತಾರೆ.

## ಅಡಿ ಟಿಪ್ಪಣಿ

1. ಮನುಸ್ಮೃತಿ – ಪು–200, 201
2. ಮನುಸ್ಮೃತಿ – ಪು–136.
3. ಮನುಸ್ಮೃತಿ – ಪು–231, 232, 233, 234.
4. ಮನುಸ್ಮೃತಿ – ಪು–195, 196.
5. ಮನುಸ್ಮೃತಿ – ಪು–198.
6. ಮನುಸ್ಮೃತಿ – ಪು–201.
7. ಮನುಸ್ಮೃತಿ – ಪು–146, 147.
8. ಮನುಸ್ಮೃತಿ – ಪು–102, 103.
9. ಮನುಸ್ಮೃತಿ – ಪು–105.

10. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು. ಸಂಪುಟ–6. ಪು.323.
11. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು–ಸಂಪುಟ–6, ಪು.322
12. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು–ಸಂಪುಟ–6. ಪು.325
13. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು–ಸಂಪುಟ–6. ಪು.326
14. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, (2015). ಸಂಪುಟ. 6, ಪು.326